19

ನಮ್ಮ ಜೀವನದ ಉದ್ದೇಶವೇನು?



مدرسة الصفة الإسلامية

MADRASATU SUFFAH AL ISLAMIYYA
SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ನಮ್ಮ ಜೀವನದ ಒಂದು ಕಠೋರ ಸತ್ಯವೆಂದರೆ ನಾವು ಎಂದು ಬದುಕಿದ್ದೇವೆ ಮತ್ತು ಒಂದು ದಿನ ನಾವು ಸಾಯಲೇಬೇಕು. ಆದರೆ ನಾವು ಇಲ್ಲಿ ಏಕೆ ಅಸ್ತಿತ್ವದಲ್ಲಿ ಇದ್ದೇವೆ ಎಂದು ಎಂದಾದರೂ ನಾವು ಯೋಚಿಸಿದ್ದೇವೆಯೇ?

ನಮ್ಮ ಸುತ್ತಮುತ್ತಲಿರುವ ಎಲ್ಲ ವಸ್ತುಗಳನ್ನು ಕೆಲಕಾಲ ವೀಕ್ಷಿಸೋಣ. ನಾವು ನಮ್ಮಿಂದಲೇ ಸೃಷ್ಟಿಸಲ್ಪಟ್ಟ ಹಲವು ವಸ್ತುಗಳಿಂದ ಸುತ್ತುವರಿಯಲ್ಪಟ್ಟಿದ್ದೇವೆ. ನಾವು ಆ ವಸ್ತುಗಳನ್ನು ಏಕೆ ಸೃಷ್ಟಿಸಿದ್ದೇವೆ? ಅವುಗಳ ಸೃಷ್ಟಿಗೆ ಉದ್ದೇಶವೇನಾದರೂ ಇದೆಯೇ? ಉತ್ತರ ಸ್ಪಷ್ಟ. ಹೌದು! ಎಲ್ಲಾ ವಸ್ತುಗಳು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಲ್ಪಟ್ಟಿವೆ. ನಮ್ಮ ದೇಹದಲ್ಲಿರುವ ಅಂಗಗಳನ್ನು ಗಮನಿಸಿ. ಅವುಗಳಲ್ಲಿ ಯಾವುದಾದರೂ ಅಂಗವು ಉದ್ದೇಶರಹಿತವಾಗಿ ಸೃಷ್ಟಿಸಿರುವುದು ನಮಗೆ ಕಂಡುಬರುತ್ತದೆಯೇ? ಇಲ್ಲ! ಹಾಗಾದರೆ ಭೂಮಿಯ ಮೇಲೆ ನಮ್ಮ ಅಸ್ತಿತ್ವಕ್ಕೆ ಉದ್ದೇ-

ಶವಿಲ್ಲವೆಂದು ನಾವು ಹೇಗೆ ಒಪ್ಪಿಕೊಳ್ಳಬಹುದು? ವಿವೇಕವಂತರು ಮನುಷ್ಯನ ಸೃಷ್ಟಿಯ ಉದ್ದೇಶವನ್ನು ಎಂದೂ ಅಲ್ಲಗಳೆಯಲಾರರು.

ನಾವು ಏಕೆ ಸೃಷ್ಟಿಸಲ್ಪಟ್ಟಿದ್ದೇವೆ? ಖ್ಯಾತಿ, ಐಶ್ವರ್ಯ ಗಳಿಸುವುದಕ್ಕೋ? ವಿನೋದಕ್ಕೋ? ಅಲ್ಲ! ಇವೆಲ್ಲಕ್ಕೂ ಮಿಗಿಲಾಗಿ ಈ ಜೀವನಕ್ಕೆ ಒಂದು ಸ್ಪಷ್ಟ ಉದ್ದೇಶವಿದೆ. ಬನ್ನಿ, ಒಂದು ಕ್ಷಣ ಈ ವಿಷಯದ ಕುರಿತು ಚಿಂತಿಸೋಣ.

ಜಗತ್ತಿನಲ್ಲಿ ನಮ್ಮ ಅಸ್ತಿತ್ವದ ಉದ್ದೇಶವನ್ನು ನಿರ್ಧರಿಸುವವರು ಯಾರು? ನಾವೇ ಸ್ವತಃ ನಮ್ಮ ಜೀವನದ ಉದ್ದೇಶವನ್ನು ನಿರ್ಧರಿಸುತ್ತೇವೆ ಎಂದು ನೀವು ಉತ್ತರಿಸಬಹುದು. ಆದರೆ ನಮ್ಮ ಜೀವನದ ಗುರಿಯನ್ನು ನಾವು ನಿರ್ಧರಿಸಬಹುದೇ ಹೊರತು ಉದ್ದೇಶವನ್ನಲ್ಲ.

ಇದನ್ನು ನಾವು ಒಂದು ಪೆನ್ನಿನ (ಲೇಖನಿಯ) ಉದಾಹರಣೆಯೊಂದಿಗೆ ತಿಳಿಯೋಣ. ಪೆನ್ನನ್ನು ನಿರ್ಮಿಸಿರುವುದರ

ಹಿಂದಿನ ಉದ್ದೇಶವೇನು? ಬರವಣಿಗೆಗೆ ಉಪಯೋಗವಾಗಲೆಂದು ಪೆನ್ನನ್ನು ರಚಿಸಲಾಯಿತು ಎಂಬುವುದು ಸಾರ್ವತ್ರಿಕ ಸತ್ಯ. ಇದರ ಉದ್ದೇಶವನ್ನು ನಿರ್ಧರಿಸುವವರು ಯಾರು? ಯಾರು ಪೆನ್ನನ್ನು ಮೊಟ್ಟಮೊದಲು ನಿರ್ಮಿಸಿದರೋ ಅವರೇ ಅದರ ಉದ್ದೇಶವನ್ನು ನಮಗೆ ತಿಳಿಸಿದರು ಎಂಬುವುದು ಇದರ ಉತ್ತರವಾಗಿದೆ. ಈಗ ಒಬ್ಬ ಇದೇ ಪೆನ್ನನ್ನು ತುರಿಸಲು ಉಪಯೋಗಿಸಿದನು ಎಂಬ ಮಾತ್ರಕ್ಕೆ ಪೆನ್ನಿನ ಮೂಲ ಉದ್ದೇಶವು ಬೆನ್ನನ್ನು ತುರಿಸುವುದು ಎಂದು ತೀರ್ಮಾನಿಸಲು ಸಾಧ್ಯವೇ? ಇದರಿಂದ ಪೆನ್ನಿನ ನೈಜ ಉಪಯೋಗವನ್ನು ಅದರ ಸಂಶೋಧಕನಿಗೆ ಮಾತ್ರ ನಿರ್ಧರಿಸಲು ಸಾಧ್ಯ ಎಂದು ನಾವು ತಿಳಿಯಬಹುದು. ಇದೇ ರೀತಿ ಮಾನವಕೋಟಿಯು ತನ್ನ ಅಸ್ತಿತ್ವಕ್ಕೆ ತನ್ನದೇ ಆದ ವಿವಿಧ ಬಗೆಯ ಕಾರಣಗಳನ್ನು ಮುಂದಿಡಬಹುದೇ ಹೊರತು ಅದರ ನೈಜ ಉದ್ದೇಶವನ್ನು ಕಂಡುಕೊಳ್ಳುವುದು ಸುಲಭಸಾಧ್ಯವಲ್ಲ. ನಮ್ಮ ಜೀವನದ ನೈಜ

ಉದ್ದೇಶವನ್ನು ಸರ್ವಶಕ್ತನಾದ ಸೃಷ್ಟಿಕರ್ತನಿಗೆ ಮಾತ್ರ ನಿರ್ಧರಿಸಲು ಸಾಧ್ಯ.

ನಮಗೊಬ್ಬ 'ಸೃಷ್ಟಿಕರ್ತ' ಇದ್ದಾನೆಯೇ? ಅಥವಾ ನಮ್ಮ ಅಸ್ತಿತ್ವಕ್ಕೆ ವಿಕಸನ ಸಿದ್ಧಾಂತ ಕಾರಣವಾಯಿತೇ?

ನಾವು ಒಂದು ಸೇತುವೆಯನ್ನು ಅಥವಾ ಯಂತ್ರವನ್ನು ನೋಡಿದಾಗ, ಅದರ ಹಿಂದೆ ಒಬ್ಬ ನಿರ್ಮಾಪಕನ ಅಥವಾ ಒಂದು ಸಂಸ್ಥೆಯ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಹಾಗಾದರೆ ಅತ್ಯುತ್ತಮವಾದ ವಿನ್ಯಾಸ, ಶಿಸ್ತು ಮತ್ತು ರಚನೆಯನ್ನು ಹೊಂದಿರುವ ಈ ವಿಶ್ವದ ಬಗ್ಗೆ ನೀವೇನು ಹೇಳುವಿರಿ?

ಉದಾಹರಣೆಗೆ, ಮುಂದಿನ 200 ವರ್ಷಗಳ ಸೂರ್ಯೋದಯ, ಸೂರ್ಯಾಸ್ತ, ಸೂರ್ಯಗ್ರಹಣ ಮತ್ತು ಚಂದ್ರ ಗ್ರಹಣಗಳ ಸಮಯವನ್ನು ನಿಖರವಾಗಿ ಹಾಗೂ ಮುಂಚಿ-

ತವಾಗಿಯೇ ತಿಳಿಯಬಹುದು. ಇದು ವಿಶ್ವ ಮಂಡಲದಲ್ಲಿ ತೇಲುತ್ತಿರುವ ಸಹಸ್ರಾರು ಗ್ರಹ ನಕ್ಷತ್ರಗಳ ನಡುವಿನ ಸಮತೋಲನವನ್ನು ಸಾರುತ್ತದೆ. ವಿಶ್ವದ ಅತ್ಯುತ್ತಮ ರಚನೆಗೆ ಇದೊಂದು ಅತ್ಯದ್ಭುತವಾದ ಉದಾಹರಣೆ-ಯಾಗಿದೆ.

ವಿವಿಧ ಬಣ್ಣಗಳನ್ನು ಗೋಡೆಗೆ ಅವ್ಯವಸ್ಥಿತವಾಗಿ ಸಿಂಪ-ಡಿಸಿದಾಗ ಮನೆ ಅಥವಾ ಪಕ್ಷಿಯೊಂದರ ಆಕೃತಿಯು ರಚನೆಯಾಗಲು ಸಾಧ್ಯವಿಲ್ಲ. ಈ ವಿಶ್ವವು ಮೊನಾಲಿಸಾಳ ಆಕೃತಿಗಿಂತ ಎಷ್ಟೋ ಪಟ್ಟು ಕ್ಲಿಷ್ಟಕರವಾಗಿದೆ. ಹಾಗಾದರೆ ಈ ವಿಶ್ವದ ರಚನೆಯು ಒಬ್ಬ ಸೃಷ್ಟಿಕರ್ತನಿಲ್ಲದೇ ಅಸ್ತಿತ್ವಕ್ಕೆ ಬಂದಿದೆ ಎಂಬ ನಂಬುವುದು ಹೇಗೆ ಸಾಧ್ಯ?

ನಮಗೆಲ್ಲರಿಗೂ ಗೊತ್ತಿರುವ ಹಾಗೆ ಒಂದು ಸ್ಫೋಟದಿಂದ ಕೇವಲ ವಿನಾಶವಾಗುತ್ತದೆ. ಹಾಗಾದರೆ ಈ ಸುಂದರ-ವಾದ ಮತ್ತು ಪರಿಪೂರ್ಣವಾದ ರಚನೆಯು ಕೇವಲ ಒಂದು 'ಬಿಗ್ ಬ್ಯಾಂಗ್' ನಂತಹ ಮಹಾಸ್ಫೋಟದಿಂದ

ಉದ್ಭವಿಸಿದ್ದೇ? ಒಂದು ವೇಳೆ ಮರ್ಸಿಡಿಸ್ ಬೆಂಜ್ ಮತ್ತು ರೋಲ್ಸ್ ರಾಯ್ಸ್ ಕಾರುಗಳು ಒಂದು ನಿರುಪಯುಕ್ತ ವಸ್ತು ಸಂಗ್ರಹದ ಸ್ಫೋಟದಿಂದ ಉತ್ಪತ್ತಿಯಾದವು ಎಂದು ಹೇಳಿದರೆ ನೀವು ನಂಬುತ್ತೀರಾ?

ದೇವನು ವಿಶ್ವವನ್ನು ಸೃಷ್ಟಿಸಿದ್ದಾನೆ ಎಂದಾದರೆ ಅವನನ್ನು ಸೃಷ್ಟಿಸಿದ್ದು ಯಾರು?

ವಿಶ್ವ ವಿಜ್ಞಾನ (ಕಾಸ್ಮಾಲಜಿ–ವಿಶ್ವದ ರಹಸ್ಯಗಳನ್ನು ವಿಶ್ಲೇಷಿಸುವ ವಿಜ್ಞಾನ) ಪ್ರಕಾರ ಈ ವಿಶ್ವಕ್ಕೆ ಒಂದು ಆರಂಭವಿತ್ತು ಮತ್ತು ಈ ವಿಶ್ವದ ಆರಂಭದೊಂದಿಗೆ ಕಾಲವೆಂಬ ಮಾನದಂಡವು ಅಸ್ತಿತ್ವಕ್ಕೆ ಬಂತು. ಇದರಿಂದ ಒಂದು ವಸ್ತು ಅಥವಾ ಜೀವಿಯ ಆರಂಭ (ಹುಟ್ಟು) ಮತ್ತು ಅಂತ್ಯವನ್ನು (ಸಾವು) ನಿರ್ಧರಿಸಬಹುದು. ಈ ವಿಶ್ವದಲ್ಲಿ ಸೃಷ್ಟಿಸಲ್ಪಟ್ಟ ಎಲ್ಲಾ ವಸ್ತುಗಳು 'ಸಮಯ'ಕ್ಕೆ ಅವಲಂಬಿತವಾಗಿವೆ. ಆ ಕಾರಣದಿಂದಲೇ ಅವುಗಳಿಗೆ

ಆರಂಭ ಮತ್ತು ಅಂತ್ಯವಿದೆ. ಆದರೆ ಯಾರು ಸಮಯ-ವನ್ನು ಸೃಷ್ಟಿಸಿದನೋ ಅವನು ಈ ಸಮಯ (ಕಾಲ)ದ ಜಾಲದಿಂದ ಮುಕ್ತನಾಗಿದ್ದಾನೆ. ಅವನೇ ಸೃಷ್ಟಿಕರ್ತನು. ಹಾಗಾಗಿ ಸೃಷ್ಟಿಕರ್ತನಿಗೆ ಆರಂಭ ಮತ್ತು ಅಂತ್ಯವಿಲ್ಲ. ಅವನು ಆದಿಕಾಲದಿಂದಲೂ ಅಸ್ತಿತ್ವದಲ್ಲಿಯೇ ಇದ್ದಾನೆ. ದೇವನು ಸದಾಕಾಲ ಅಸ್ತಿತ್ವದಲ್ಲಿರುವುದರಿಂದ ಅವನಿಗೆ ಯಾರೂ ಸೃಷ್ಟಿಕರ್ತರಿಲ್ಲ.

ದೇವನು ಮಾನವ ಕುಲಕ್ಕೆ ನನ್ನ ಕಡೆಯಿಂದ ಮಾರ್ಗದರ್ಶನ ಮಾಡಿದ್ದಾನೆಯೇ?

ದೇವನ ನಮ್ಮನ್ನು ಸೃಷ್ಟಿಸಿ ಮಾರ್ಗದರ್ಶನ ಮಾಡದೆ ಹಾಗೆಯೇ ಬಿಡಲಿಲ್ಲ. ನೀವು ಕಾರನ್ನು ಓಡಿಸುವುದು ಹೇಗೆ ಎಂದು ತೋರಿಸಬೇಕಿದ್ದರೆ ಕಾರನ್ನೇ ಬಳಸುತ್ತೀ-ರಿ ಹೊರತು ಬೈಕನ್ನಲ್ಲ. ಹಾಗೆಯೇ, ದೇವನು ಉತ್ತಮ ಮನುಷ್ಯರನ್ನು ಆಯ್ಕೆ ಮಾಡಿ ಅವರ ಮೂಲಕ ಇತರ

ಮನುಷ್ಯರಿಗೆ ಉತ್ತಮ ಜೀವನ ಹೇಗೆ ನಡೆಸಬೇಕೆಂದು ತಿಳಿಸಿಕೊಟ್ಟನು. ಅವರೇ ದೇವನು ಕಳುಹಿಸಿದ ಪ್ರವಾದಿ-ಗಳು. ಎಲ್ಲಾ ಪ್ರವಾದಿಗಳು ನಮ್ಮಂತೆ ಮಾನವರೇ ಆಗಿದ್ದ-ರು. ಅವರಿಗೆ ಯಾವುದೇ ದೈವಿಕ ಶಕ್ತಿ ಇಲ್ಲ. ಸಂಸ್ಕೃತದಲ್ಲಿ ಅವರನ್ನು 'ಮಹರ್ಷಿ'ಗಳೆಂದು ಕರೆಯುತ್ತಾರೆ. ಅವರು ಸಮಾಜದಲ್ಲಿ ಮಾದರಿ ವ್ಯಕ್ತಿಗಳಾಗಿ, ಮಾನವಕುಲದ ನಾಯಕರಾಗಿ ಇತಿಹಾಸದಲ್ಲಿ ಜೀವಿಸಿದ್ದರು.

ಭಾರತವೂ ಸೇರಿದಂತೆ ಭೂಮುಖದ ಎಲ್ಲಾ ಪ್ರದೇಶಗ-ಳಿಗೆ ಆಯಾ ಕಾಲದಲ್ಲಿ, ಆಯಾ ನಿರ್ದಿಷ್ಟ ಸಮುದಾಯ-ಕ್ಕೆ ಸಂದೇಶವಾಹಕರನ್ನು ಕಳುಹಿಸಲಾಗಿತ್ತು.

ಪ್ರವಾದಿ ನೂಹ್, ಅಬ್ರಹಾಂ, ಮೋಸೆಸ್, ಡೇವಿಡ್, ಸೊಲೋಮೊನ್, ಯೇಸು (ಇವರೆಲ್ಲರ ಮೇಲೆ ಶಾಂತಿ-ಯಿರಲಿ) ಇವು ವಿವಿಧ ಕಾಲಘಟ್ಟಗಳಲ್ಲಿ ಈ ಭೂಮಿಗೆ ಆಗಮಿಸಿದ ಕೆಲವು ಪ್ರವಾದಿಗಳ ಹೆಸರುಗಳಾಗಿವೆ. ಹೀಗೆ ಈ ಜಗತ್ತಿಗೆ ಅಂತಿಮ ಪ್ರವಾದಿಯಾಗಿ ಸೃಷ್ಟಿಕರ್ತನಿಂದ

ನೇಮಿಸಲ್ಪಟ್ಟರೇ ಪ್ರವಾದಿ ಮುಹಮ್ಮದ್ (ಇವರ ಮೇಲೆ ಶಾಂತಿಯಿರಲಿ). ಈ ಹಿಂದೆ ಕಳುಹಿಸಲಾದ ಎಲ್ಲಾ ಪ್ರವಾದಿಗಳು ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ಸೀಮಿತವಾದ ಸಂದೇಶವನ್ನು ತಂದಿದ್ದರು. ಆದರೆ ಅಂತ್ಯ ಪ್ರವಾದಿ ಮುಹಮ್ಮದ್ (ಇವರ ಮೇಲೆ ಶಾಂತಿಯಿರಲಿ) ಸಕಲ ಮಾನವ ಕುಲಕ್ಕೆ ಮಾರ್ಗದರ್ಶಕರಾಗಿ ಈ ಜಗತ್ತಿಗೆ ಆಗಮಿಸಿದರು. ಅವರ ಸಂದೇಶವು ಈ ಭೂಮಿಯು ಅಸ್ತಿತ್ವದಲ್ಲಿರುವ ತನಕ ಎಲ್ಲರಿಗೂ ಅನ್ವಯವಾಗುತ್ತದೆ.

ಪ್ರವಾದಿ ಮುಹಮ್ಮದ್(ಸ) ಯಾವುದೇ ನವೀನ ಧರ್ಮ ಅಥವಾ ಸಂದೇಶವನ್ನು ತಂದಿಲ್ಲ. ಬದಲಾಗಿ ಅವರು ಈ ಹಿಂದಿನ ಪ್ರವಾದಿಗಳು ಜನರ ಮುಂದಿಟ್ಟಿದ್ದ ಸಂದೇಶಕ್ಕೆ ಕೇವಲ ಮರುಜೀವವನ್ನಷ್ಟೇ ನೀಡಿದ್ದರು.

ಪ್ರವಾದಿಗಳ ಬೋಧನೆಗಳೇನು?

'ಸೃಷ್ಟಿಕರ್ತ'ನಿಂದ ಈ ಭೂಮಿಗೆ ಕಳುಹಿಸಲ್ಪಟ್ಟ ಎಲ್ಲಾ ಪ್ರವಾದಿಗಳ ಸಂದೇಶದ ಸಾರಾಂಶವನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ನಮ್ಮ ಜೀವನದ ಉದ್ದೇಶ
2. ದೇವನ ಗುಣಲಕ್ಷಣಗಳು
3. ಈ ಭೂಮಿಯಲ್ಲಿ ನಾವೆಸಗುವ ಪ್ರತಿಯೊಂದು ಕರ್ಮ(ಕ್ರಿಯೆ)ಕ್ಕೂ ಸೃಷ್ಟಿಕರ್ತನ ಮುಂದೆ ಲೆಕ್ಕ ಒಪ್ಪಿಸಬೇಕಾಗಿದೆ.

ನಮ್ಮ ಜೀವನದ ಉದ್ದೇಶ

ನಮ್ಮ ಜೀವನದ ಉದ್ದೇಶವು ಸೃಷ್ಟಿಕರ್ತನನ್ನು ಮಾತ್ರ ಆರಾಧಿಸುವುದಾಗಿದೆ. ಅವನನ್ನು ಹೊರತುಪಡಿಸಿ ಬೇರೆ ಯಾರನ್ನೂ ಆರಾಧಿಸಬಾರದು. (ಸೃಷ್ಟಿಕರ್ತನ-

ನ್ನು ಆರಾಧಿಸಿ ಅವನ ಸೃಷ್ಟಿಗಳಾದ ಸೂರ್ಯ, ಚಂದ್ರ, ಆಕಾಶ, ಭೂಮಿ, ನೀರು, ವಾಯು, ಮೂರ್ತಿ, ಚಿತ್ರ, ವಿಗ್ರಹ ಇತ್ಯಾದಿಗಳನ್ನು ಆರಾಧಿಸಬಾರದು. ಯಾವ ವಸ್ತುವನ್ನೂ ಯಾವ ಜೀವಿಯನ್ನೂ ದೇವನ ಸ್ಥಾನಕ್ಕೆ ಏರಿಸಬಾರದು ಮತ್ತು ಅವನ ಅಸ್ತಿತ್ವವನ್ನು ನಿರಾಕರಿ-ಸಬಾರದು.)

'ದೇವ'ನ ಗುಣಲಕ್ಷಣಗಳೇನು?

1. ದೇವನು ಏಕೈಕನು ಮತ್ತು ಅವನಿಗೆ ಸರಿಸಮಾ-ನರು ಯಾರು ಇಲ್ಲ.
2. ಅವನು ನಿರಪೇಕ್ಷನು. ಅಂದರೆ ಅವನು ಆಹಾರ, ನಿದ್ದೆ, ಕುಟುಂಬ, ಮಡದಿ, ಮಕ್ಕಳು ಮುಂತಾದ ಎಲ್ಲಾ ಬೇಡಿಕೆಗಳಿಂದ ಮುಕ್ತನಾಗಿದ್ದಾನೆ. ಆದ್ದ-ರಿಂದ ದೇವನು ನಿದ್ರಿಸುವುದಿಲ್ಲ, ಭೋಜನ ಮಾ-ಡುವುದಿಲ್ಲ, ಅವನಿಗೆ ಮಾತಾಪಿತರಾಗಲಿ ಮಡದಿ

ಮಕ್ಕಳಾಗಲಿ ಇಲ್ಲ.

3. ದೇವನು ಅತ್ಯಂತ ಶಕ್ತಿಶಾಲಿಯಾಗಿ ಅವನ ಸೃಷ್ಟಿಗಳಿಂದ ಭಿನ್ನವಾಗಿರುವುದರಿಂದ ಅವನಿಗೆ ಆಯಾಸವಾಗುವುದಿಲ್ಲ. ಅವನಿಗೆ ಮರೆಯುವಿಕೆ ಇಲ್ಲ. ಅವನಿಂದ ಯಾವುದೇ ತಪ್ಪು ಸಂಭವಿಸುವುದಿಲ್ಲ.

4. ಎಲ್ಲಾ ಮಾನವರು ಅವನ ದೃಷ್ಟಿಯಲ್ಲಿ ಸರಿಸಮಾನರು. ಅವನು ಎಲ್ಲರನ್ನೂ ಪ್ರೀತಿಸುತ್ತಾನೆ. ಜಾತಿ, ಮತ, ವರ್ಣ, ಕುಲ, ಗೋತ್ರ, ಮಹಿಮೆ ಅಥವಾ ವಂಶದ ಆಧಾರದ ಮೇಲೆ ತಾರತಮ್ಯ ಮಾಡುವುದಿಲ್ಲ.

ಮರಣಾನಂತರ ಜೀವನ

ಎಲ್ಲಾ ವಸ್ತುಗಳಂತೆ ಈ ಭೂಮಿಯು ಒಂದು ದಿನ ಅಂತ್ಯಗೊಳ್ಳಲಿದೆ. ಆ ದಿನವನ್ನೇ 'ನಿರ್ಣಾಯಕ ದಿನ'

ಅಥವಾ ನ್ಯಾಯದ ದಿನ ಎಂದು ಕರೆಯಲಾಗುತ್ತದೆ. ಅಂದು ಈ ಭೂಮಿಯ ಪ್ರಾರಂಭದಿಂದ ಅಂತ್ಯದವರೆಗಿನ ಎಲ್ಲ ಮನುಷ್ಯರಿಗೂ ಪುನರ್ಜೀವ ನೀಡಲಾಗುವುದು. ಅವರು ಮಾಡಿದ ಕೃತ್ಯಗಳ ಬಗ್ಗೆ ಅವರಲ್ಲಿ ಪ್ರಶ್ನಿಸಲಾಗುವುದು. ಯಾರು ಕೇವಲ ಸೃಷ್ಟಿಕರ್ತನನ್ನು ಮಾತ್ರ ಆರಾಧಿಸಿ ಉತ್ತಮ ಕಾರ್ಯಗಳನ್ನು ಮಾಡುತ್ತಾ ತಮಗೆ ಭೂಮಿಯಲ್ಲಿ ಲಭಿಸಿದ ಕಾಲಾವಧಿಯಲ್ಲಿ ದೇವನ ಆಜ್ಞೆಗಳನ್ನು ಅನುಸರಿಸಿ ಜೀವಿಸುತ್ತಾರೋ ಅವರಿಗೆ ಉತ್ತಮ ಪ್ರತಿಫಲವನ್ನು ನೀಡಲಾಗುವುದು. ಯಾರು ದೇವನನ್ನು ಧಿಕ್ಕರಿಸಿ ಅವನ ಆಜ್ಞೆಗಳನ್ನು ಪಾಲಿಸಲಿಲ್ಲವೋ ಅವರಿಗೆ ಶಿಕ್ಷೆ ನೀಡಲಾಗುವುದು. ಉತ್ತಮ ಪ್ರತಿಫಲವು ಸ್ವರ್ಗವಾಗಿದೆ ಮತ್ತು ಶಿಕ್ಷೆ ನರಕವಾಗಿದೆ. ಸ್ವರ್ಗ ಮತ್ತು ನರಕದ ಜೀವನವು ಶಾಶ್ವತವಾಗಿದೆ. ಅದಕ್ಕೆ ಕೊನೆಯಿಲ್ಲ.

'ಮರಣಾನಂತರ ಜೀವನ' ಅಥವಾ 'ನಿರ್ಣಾ-ಯಕ ದಿನ'ದ ಅಗತ್ಯವಾದರೂ ಏನು?

ನಮ್ಮಲ್ಲಿ ಪ್ರತಿಯೊಬ್ಬರೂ ನ್ಯಾಯವನ್ನು ಬಯಸುತ್ತಾರೆ. ಇತರರಿಗೆ ನ್ಯಾಯವನ್ನು ಬಯಸದವನು ತನಗೆ ಮಾತ್ರ ನ್ಯಾಯ ದೊರೆಯಲೇಬೇಕೆಂದು ಹಂಬಲಿಸುವುದನ್ನು ನಾವು ಕಾಣುತ್ತೇವೆ. ಬಡವ ಶ್ರೀಮಂತರೆಂಬ ಭೇದ-ವಿಲ್ಲದೆ ಎಲ್ಲರೂ ತಮಗೆ ಅನ್ಯಾಯವೆಸಗಿದವರಿಗೆ ತಕ್ಕ ಶಿಕ್ಷೆಯಾಗಬೇಕೆಂದು ಆಶಿಸುತ್ತಾರೆ. ಒಬ್ಬ ದರೋಡೆ-ಕೋರ ಅಥವಾ ಅತ್ಯಾಚಾರಿಗೆ ಆತ ಎಸಗಿದ ತಪ್ಪಿಗೆ ಅನುಗುಣವಾಗಿ ಕಠಿಣ ಶಿಕ್ಷೆಯಾಗಬೇಕೆಂದು ಜನರು ಬಯಸುತ್ತಾರೆ. ಹಾಗಾದರೆ ಅಪರಾಧಿಗಳಿಗೆ ಅವರು ಮಾಡಿದ ತಪ್ಪಿಗೆ ತಕ್ಕಂತೆ ಶಿಕ್ಷೆಯನ್ನು ಜಾರಿಗೊಳಿಸುವ ನ್ಯಾಯಯುತವಾದ ಪರಿಪೂರ್ಣ ವ್ಯವಸ್ಥೆ ಈ ಭೂಮಿ-ಯಲ್ಲಿದೆಯೇ?

ಉದಾಹರಣೆಗೆ, ಹಿಟ್ಲರ್‌ನ ದಬ್ಬಾಳಿಕೆಯ ಕಾಲದಲ್ಲಿ ಸಾವಿರಾರು ಅಮಾಯಕರು ಪ್ರಾಣ ಕಳೆದುಕೊಂಡರು. ಒಂದು ವೇಳೆ ಪೊಲೀಸರು ಆತನನ್ನು ಬಂಧಿಸಿದ್ದರೆ ಮಾನವನಿರ್ಮಿತ ನ್ಯಾಯ ವ್ಯವಸ್ಥೆ ಆತ ಎಸಗಿದ ಅಪರಾಧಕ್ಕೆ ಯಾವ ಶಿಕ್ಷೆಯನ್ನು ನಿರ್ಧರಿಸುತ್ತಿತ್ತು? ಹೆಚ್ಚೆಂದರೆ ಆತನಿಗೆ ಮರಣದಂಡನೆ ಅಥವಾ ಗ್ಯಾಸ್ ಚೇಂಬರ್ (Gas Chamber)ನ ಒಳಗೆ ಕಳುಹಿಸುವಂತೆ ಆದೇಶಿಸುತ್ತಿತ್ತು. ಈ ರೀತಿ ಮಾಡಿದ್ದರೆ ಕೇವಲ ಒಬ್ಬ ಯಹೂದಿಯನ್ನು ಕೊಂದದ್ದಕ್ಕೆ ಶಿಕ್ಷೆ ನೀಡಿದಂತೆ ಆಗುತ್ತಿತ್ತೇ ವಿನಾ ಸಾವಿರಾರು ಯಹೂದಿಗಳ ಪ್ರಾಣ ಹರಣಕ್ಕೆ ನ್ಯಾಯ ಒದಗಿಸಿದಂತೆ ಆಗುತ್ತಿರಲಿಲ್ಲ. ಸಾವಿರಾರು ಯಹೂದಿಗಳನ್ನು ಕೊಲೆಗೈದ ಹಿಟ್ಲರ್‌ನನ್ನು ಸಾವಿರ ಸಲ ನೇಣುಗಂಬಕ್ಕೇರಿಸಿ ಮರಣದ ರುಚಿ ಅನುಭವಿಸುವಂತೆ ಮಾಡುವ ನ್ಯಾಯ ವ್ಯವಸ್ಥೆಯನ್ನು ಈ ಭೂಮಿಯಲ್ಲಿ ಸ್ಥಾಪಿಸಲು ಸಾಧ್ಯವೇ?

ಸಾಬೀತಾದ ಅಪರಾಧಿಗಳಿಗೆ ಕೆಲವೊಮ್ಮೆ ನ್ಯಾಯಾಧೀಶರು ಎರಡೆರಡು ಬಾರಿ 'ಜೀವಾವಧಿ' ಶಿಕ್ಷೆಯನ್ನು ವಿಧಿಸಿರುವ ಸನ್ನಿವೇಶಗಳಿವೆ. ಕೆಲವೊಮ್ಮೆ ಇದು 'ನೂರು' ವರ್ಷಕ್ಕಿಂತಲೂ ಅಧಿಕವಾಗಿರುತ್ತದೆ. ಇದು ಅಪರಾಧಿಯ ಅಪರಾಧದ ಭಯಾನಕತೆಗೆ ನ್ಯಾಯಾಧೀಶರು ನಿರ್ಣಯಿಸುವ ತೀರ್ಮಾನವಾಗಿರುತ್ತದೆ.

ಇಂತಹ ಸಂದರ್ಭದಲ್ಲಿ ಅಪರಾಧಿ ತನ್ನ ಶಿಕ್ಷೆಯ ಅವಧಿಯನ್ನು ಪೂರ್ಣಗೊಳಿಸುತ್ತಾನೆ ಎಂದು ಖಾತ್ರಿಯಾಗಿ ಹೇಳುವುದು ನಮ್ಮಿಂದ ಸಾಧ್ಯವೇ?

ನೈಜ, ಪರಿಪೂರ್ಣ ಮತ್ತು ನಿಷ್ಪಕ್ಷವಾದ ನ್ಯಾಯವೆಂದರೆ ಅನ್ಯಾಯ ಅಥವಾ ಅಕ್ರಮಕ್ಕೆ ಒಳಗಾದವರ ಸಮ್ಮುಖದಲ್ಲಿ ನ್ಯಾಯ ಒದಗಿಸುವ ವ್ಯವಸ್ಥೆ ಇರಬೇಕು. 'ಹಿಟ್ಲರ್' ನಿಂದ ಸಾಮೂಹಿಕ ಹತ್ಯೆಗೀಡಾದ ಆ ಮುಗ್ಧ ಜನರಿಗೆ ಯಾವ ರೀತಿಯ ಪರಿಹಾರವನ್ನು ನೀಡಲು ಸಾಧ್ಯ? ಅವರಿಗೆ ನ್ಯಾಯ ಒದಗಿಸಲು ಅವರಿಂದು ಜೀವಂತವಿ-

ದ್ದಾರೆಯೇ? ಸತ್ಕರ್ಮವೆಸಗುತ್ತಿದ್ದ ಅನೇಕ ಸಜ್ಜನರನ್ನು ವಿನಾಕಾರಣ ಹಿಂಸಿಸಿ ಅವರನ್ನು ಕೊಲೆ ಮಾಡಿದ ಉದಾಹರಣೆಗಳು ಇತಿಹಾಸದಲ್ಲಿ ನಮಗೆ ಕಾಣಲು ಸಿಗುತ್ತದೆ. ಈ ರೀತಿ ತಮ್ಮ ಜೀವನವನ್ನು ಕಳೆದುಕೊಂಡ ಮಹಾನ್ ವ್ಯಕ್ತಿಗಳಿಗೆ ಅವರ ಸತ್ಕರ್ಮಗಳ ಪರಿಹಾರವನ್ನು ನೀಡಬೇಕೆಂದು ನೀವು ಚಿಂತಿಸುವುದಿಲ್ಲವೇ?

ಈ ಜೀವನದಲ್ಲಿ ನಾವು ಎಸಗಿದ ಕರ್ಮಗಳಿಗೆ ನ್ಯಾಯಯುತವಾದ ಪ್ರತಿಫಲ ದೊರೆಯುವಂತಾಗಬೇಕಾದರೆ ಮರಣಾನಂತರ ಜೀವನದ ಅಗತ್ಯ ಇದೆ ಎಂಬುವುದನ್ನು ಯಾವ ಬುದ್ಧಿಜೀವಿಯೂ ಅಲ್ಲಗಳೆಯಲಾರ.

ಪುನರುತ್ಥಾನ ಅಥವಾ ನಿರ್ಣಾಯಕ ದಿನದಂದು ಸೃಷ್ಟಿಕರ್ತನಾದ ದೇವನು ಸತ್ಕರ್ಮವೆಸಗಿದವರಿಗೆ ಉತ್ತಮ ಪ್ರತಿಫಲವನ್ನೂ ದೇವಧಿಕ್ಕಾರಿಗಳಿಗೆ ಶಿಕ್ಷೆಯನ್ನೂ ನೀಡುವ ವ್ಯವಸ್ಥೆಯೊಂದನ್ನು ಸ್ಥಾಪಿಸುವನು. ಅವನು ತನ್ನ ಸೃಷ್ಟಿಗಳ ಮೇಲೆ ಎಂದೂ ಅನ್ಯಾಯವೆಸಗಲಾರ.

ಸ್ವರ್ಗ ಮತ್ತು ನರಕದ ಜೀವನವು ಶಾಶ್ವತವಾದ ಕಾರಣ, ಹಿಟ್ಲರ್ ಅಥವಾ ಆತ್ಮಾಹುತಿ ದಾಳಿಗಳ ಮೂಲಕ ಸಾವಿರಾರು ಮುಗ್ಧ ಜನರ ಬಲಿತೆಗೆದುಕೊಂಡ ಅಪ-ರಾಧಿಗಳಿಗೆ ಅವರ ತಪ್ಪಿಗೆ ಅನುಗುಣವಾಗಿ ಶಿಕ್ಷೆ ನೀಡುವುದು ಕಷ್ಟವಲ್ಲ. ಅವರಿಗೆ ತಮ್ಮ ಕರ್ಮಫಲಗಳ ರುಚಿಯನ್ನು ಅನುಭವಿಸುವಂತಹ ವ್ಯವಸ್ಥೆಯನ್ನು ಸೃ-ಷ್ಟಿಕರ್ತನು 'ನಿರ್ಣಾಯಕ ದಿನ' ದಂದು ಸ್ಥಾಪಿಸುವನು. ಅದೇ ರೀತಿ ಅನ್ಯಾಯಕ್ಕೊಳಗಾಗಿ ವಿನಾಕಾರಣ ತಮ್ಮ ಪ್ರಾಣವನ್ನು ಕಳೆದುಕೊಂಡ ಮುಗ್ಧ ಹಾಗೂ ಸಜ್ಜನರಿ-ಗೆ ಅವರು ಬಯಸುವ ಎಲ್ಲಾ ರೀತಿಯ ಪರಿಹಾರವನ್ನು ದೇವನು ನೀಡುವನು.

ಮರಣಾನಂತರ ಜೀವನ ಸಾಧ್ಯವೇ?

ಒಂದು ವಸ್ತುವಿಗೆ ಪ್ರಥಮಬಾರಿ ರೂಪ ನೀಡುವುದು ಕಷ್ಟ. ಆದರೆ ಅದೇ ವಸ್ತುವನ್ನು ಪುನಃ ನಿರ್ಮಿಸುವುದು

ಅಷ್ಟೇ ಸರಳವಾಗಿದೆ ಎಂಬುದು ನಮಗೆಲ್ಲಾ ತಿಳಿದಿರುವ ವಿಚಾರ. ಹಾಗಾದರೆ ನಮ್ಮನ್ನು ಮೊದಲ ಬಾರಿ ಸೃಷ್ಟಿಸಿರುವ ಸರ್ವಶಕ್ತನಾದ ದೇವನು, ನಾವು ಮರಣ ಹೊಂದಿದ ಬಳಿಕ ಪುನಃ ನಮ್ಮನ್ನು ಜೀವಂತಗೊಳಿಸುವುದು ಅವನಿಗೆ ಕಷ್ಟವಾದೀತೇ? ಇಲ್ಲ. ಸಾವಿನಿಂದ ಮರಳಿ ಜೀವ ಕೊಡುವುದು ದೇವನಿಗೆ ಬಹಳ ಸುಲಭ.

ದೇವನು ಕ್ಷಮಿಸದಿರುವ ಮಹಾಪಾಪ ಯಾವುದು?

ಸತ್ಯ ತಿಳಿದ ಬಳಿಕ ಯಾರು ಈ ಕೆಳಕಂಡ ಕಾರ್ಯಗಳನ್ನು ಮಾಡುತ್ತಾರೋ ಅವರನ್ನು ದೇವನು ಕ್ಷಮಿಸುವುದಿಲ್ಲ.

1. ದೇವನಿಗೆ ಸಮಾನರೆಂದು ತಿಳಿದು ಇತರರನ್ನು ಆರಾಧಿಸುವುದು ಅಥವಾ ವಿಧೇಯರಾಗಿರುವುದು, ಪ್ರಾರ್ಥಿಸುವುದು ಅಥವಾ ಅವರ ಮುಂದೆ ತಲೆಬಾಗುವುದು, ಸಾಷ್ಟಾಂಗವೆರಗು-

ವುದು. ಉದಾ: ನೀರು, ಗಾಳಿ, ಅಗ್ನಿ, ಮೂರ್ತಿ, ಚಿತ್ರಗಳು, ಸಂತರ ಅಥವಾ ಸಜ್ಜನರ ಗೋರಿ ಇತ್ಯಾದಿ ನೈಸರ್ಗಿಕ ಹಾಗೂ ಮಾನವ ನಿರ್ಮಿತ ವಸ್ತುಗಳ ಪೂಜೆ-ಆರಾಧನೆ ಇತ್ಯಾದಿ.

2. ಮನುಷ್ಯನನ್ನು 'ದೇವಪುತ್ರ' ಅಥವಾ 'ದೇವ-ಪತ್ನಿ' ಎಂದು ಸಂಬೋಧಿಸುವುದರ ಮೂಲಕ ಆತನನ್ನು ಪವಿತ್ರವಾದ 'ದೇವ'ನ ಸ್ಥಾನಕ್ಕೇರಿಸು-ವುದು. ಹೀಗೆ ಮನುಷ್ಯನೂ ದೇವನಿಗೆ ಸರಿಸಾ-ಟಿಯಾದ ಗುಣಗಳನ್ನು ಹೊಂದಿದ್ದಾನೆ ಎಂದು ನಂಬುವುದು.

3. ದೇವನಲ್ಲಿ ಅಪನಂಬಿಕೆ ಇಡುವುದು.

ಇಸ್ಲಾಂ ಎಂಬ ಪದದ ಅರ್ಥವೇನು?

ಇಸ್ಲಾಂ ಧರ್ಮವು ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿಯಿರಲಿ) ಸ್ಥಾಪಿಸಿದ ಹೊಸ ಧರ್ಮವಲ್ಲ. ಇಸ್ಲಾಂ

ಎನ್ನುವುದು ಅರೇಬಿಕ್ ಭಾಷೆಯ ಪದವಾಗಿದೆ. ಇದರರ್ಥ ದೇವನಿಗೆ ವಿಧೇಯವಾಗಿರುವುದು ಅಥವಾ ದೇವನ ಇಚ್ಛೆಗೆ ಶರಣಾಗುವುದು. ಎಲ್ಲಾ ಪ್ರವಾದಿಗಳು ಈ ಜೀವನ ರೀತಿಯನ್ನೇ ಬೋಧಿಸಿದ್ದರು. ದೇವನಿಗೆ ವಿಧೇಯವಾಗುವುದನ್ನು ಅರೇಬಿಕ್ ಭಾಷೆಯಲ್ಲಿ 'ಇಸ್ಲಾಂ' ಎಂದು ಹೇಳಲಾಗುತ್ತದೆ.

ಮುಸ್ಲಿಂ ಎಂದರೆ ಯಾರು?

ಯಾರು ಸೃಷ್ಟಿಕರ್ತನ ಆಜ್ಞೆಗೆ ತನ್ನನ್ನು ಸಮರ್ಪಿಸಿ ಇಸ್ಲಾಂ ಧರ್ಮವನ್ನು ಅನುಸರಿಸುತ್ತಾನೋ ಆತನನ್ನು ಮುಸ್ಲಿಂ ಎಂದು ಕರೆಯಲಾಗುತ್ತದೆ. ಇದು ಸಹ ಅರೇಬಿಕ್ ಭಾಷೆಯ ಪದವಾಗಿದೆ. ಯಾವ ರೀತಿ ವಾಹನ ಚಲಾಯಿಸುವವನು ಚಾಲಕನೆಂದು ಅನ್ನಿಸಿಕೊಳ್ಳುವನೋ, ಹಾಡು ಹಾಡುವವನು ಹಾಡುಗಾರನೆಂದು ಕರೆಯಲ್ಪಡುತ್ತಾನೋ ಹಾಗೆಯೇ ಇಸ್ಲಾಂ ಧರ್ಮವನ್ನು ಅನು-

ಸರಿಸುವವರನ್ನು 'ಮುಸ್ಲಿಂ' ಎಂದು ಕರೆಯಲಾಗುತ್ತದೆ. ನೀವು ದೇವನ ಅಜ್ಞಾನುವರ್ತಿಯಾಗಿ, ಅವನೊಬ್ಬನನ್ನೇ ಆರಾಧಿಸುವುದಾದರೆ ನಿಮ್ಮನ್ನು ಸಹ ಅರೇಬಿಕ್ ಭಾಷೆ-ಯಲ್ಲಿ ಮುಸ್ಲಿಂ ಎಂದು ಕರೆಯಲಾಗುತ್ತದೆ.

ಅಲ್ಲಾಹು ಯಾರು? ಅವನು ಮುಸ್ಲಿಮರಿಗೆ ಮಾತ್ರ ದೇವನೇ?

ಅಲ್ಲಾಹು ಮುಸಲ್ಮಾನರಿಗೆ ಮಾತ್ರ ದೇವನು ಎಂದು ಹೆಚ್ಚಿನವರು ಭಾವಿಸುತ್ತಾರೆ. ಇದೊಂದು ತಪ್ಪು ಕಲ್ಪನೆ-ಯಾಗಿದೆ. ಅಲ್ಲಾಹ್ ಎಂಬುದು ಅರೇಬಿಕ್ ಪದ. ಇದರ ಅರ್ಥ 'ದೇವ' ಎಂದಾಗಿದೆ. ಅರೇಬಿಕ್ ಭಾಷೆ ಮಾತನಾ-ಡುವ ಯಹೂದಿಗಳು ಮತ್ತು ಕ್ರೈಸ್ತರು ದೇವರು ಎಂದು ಸೂಚಿಸಲು 'ಅಲ್ಲಾಹು' ಎಂಬ ಪದವನ್ನೇ ಬಳಸುತ್ತಾರೆ.

ನೀರು(ಕನ್ನಡ), ವಾಟರ್ (ಇಂಗ್ಲಿಷ್), ಪಾನಿ (ಹಿಂದಿ) ಮಾಅ್ (ಅರೇಬಿಕ್) ಎಲ್ಲವೂ ಒಂದೇ ವಸ್ತುವನ್ನು

ಸೂಚಿಸುತ್ತವೆ. ಹೀಗೆ ಕೇವಲ ಸೂಚಿಸಲು ಉಪಯೋಗಿಸುವ ಭಾಷೆಯ ಬದಲಾವಣೆಯಿಂದ ಒಂದು ಲೋಟದಲ್ಲಿರುವ ನೀರು ತನ್ನ ಗುಣವನ್ನು ಬದಲಾಯಿಸುವುದಿಲ್ಲ. ದೇವ (ಕನ್ನಡ), ಗಾಡ್ (ಇಂಗ್ಲಿಷ್), ಈಶ್ವರ್ (ಹಿಂದಿ) ಮತ್ತು ಅಲ್ಲಾಹು (ಅರೇಬಿಕ್) ಎಲ್ಲವೂ ನಮ್ಮ ನಿಮ್ಮೆಲ್ಲರನ್ನು ಸೃಷ್ಟಿಸಿದ ಜಗದೊಡೆಯನನ್ನೇ ಸೂಚಿಸುತ್ತವೆ.

ಮೇಲೆ ತಿಳಿಸಿರುವ ಎಲ್ಲಾ ಚರ್ಚೆಗಳಿಗೆ ಕುರ್‌ಆನ್ ಸಾಕ್ಷಿ

ನಮ್ಮೆಲ್ಲರ ಸೃಷ್ಟಿಕರ್ತನಾದ ಅಲ್ಲಾಹನಿಂದ ಅಂತ್ಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂತಿಯಿರಲಿ) ರ ಮೇಲೆ ಅವತೀರ್ಣವಾದ ದಿವ್ಯವಾಣಿಯ ಸಂಗ್ರಹವನ್ನೇ 'ಕುರ್‌ಆನ್' ಎನ್ನಲಾಗುತ್ತದೆ. ಇದು ಮಾನವರಿಗೆ ಮಾರ್ಗದರ್ಶಕ ಕೈಪಿಡಿಯಾಗಿದೆ. ಅನೇಕ ಮಂದಿ ತಿಳಿದಿರುವ ಹಾಗೆ ಪ್ರವಾದಿ ಮುಹಮ್ಮದ್ (ಅವರ ಮೇಲೆ

ಶಾಂತಿಯಿರಲಿ) ಕುರ್‌ಆನಿನ ಲೇಖಕರಲ್ಲ. ಕುರ್‌ಆನಿನ ಪ್ರತಿಯೊಂದು ವಾಕ್ಯವೂ ದೇವನಿಂದ ಅವತೀರ್ಣ-ಗೊಂಡದ್ದಾಗಿದೆ. ಸಾವಿರದ ನಾಲ್ಕುನೂರು ವರ್ಷಗಳಿಂದ ಇದು ಬದಲಾವಣೆಗೆ ತುತ್ತಾಗದೆ ತನ್ನ ನೈಜ ಸ್ಥಿತಿಯಲ್ಲಿ-ಯೇ ಉಳಿದಿದೆ. "ನನ್ನಲ್ಲಿ ಒಂದಾದರೂ ತಪ್ಪು ಹುಡುಕಿ ತೋರಿಸಿ" ಎಂದು ಕುರ್‌ಆನ್ ಸವಾಲು ಹಾಕುತ್ತದೆ.

ಕುರ್‌ಆನಿನ ಕರ್ತೃ ಹೇಳುತ್ತಾನೆ: " ಅವರೇನು ಕುರ್‌ಆ-ನ್‌ನ ಕುರಿತು ಆಲೋಚಿಸುವುದಿಲ್ಲವೇ ? ಒಂದು ವೇಳೆ ಅದು ಅಲ್ಲಾಹನ ಹೊರತು ಇತರರಿಂದ ಬಂದಿರುತ್ತಿದ್ದರೆ ಅವರಿಗೆ ಅದರಲ್ಲಿ ಅನೇಕ ತಪ್ಪುಗಳು ಮತ್ತು ವಿರೋ-ಧಾಭಾಸಗಳು ಕಾಣುತ್ತಿದ್ದವು." (ಕುರ್‌ಆನ್ ಅಧ್ಯಾಯ-4, ಸೂಕ್ತ 82)

ಕುರ್‌ಆನ್ ಭೂಶಾಸ್ತ್ರ, ಭ್ರೂಣಶಾಸ್ತ್ರ, ಖಗೋಳಶಾಸ್ತ್ರ, ಸಮುದ್ರಶಾಸ್ತ್ರ, ಕಾನೂನು ಶಾಸ್ತ್ರ, ಮನಶಾಸ್ತ್ರ, ಸಸ್ಯಶಾ-ಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ ಇತ್ಯಾದಿ ವಿಭಿನ್ನ ವಿಭಾಗ-

ಗಳ ಬಗ್ಗೆ ಮಾತನಾಡುತ್ತದೆ. ಆಶ್ಚರ್ಯಕರ ವಿಷಯ-ವೇನೆಂದರೆ, 21ನೇ ಶತಮಾನದಲ್ಲಿ ಸಂಶೋಧಿಸಲಾದ ಹಲವಾರು ವೈಜ್ಞಾನಿಕ ಅಂಶಗಳನ್ನು ಕುರ್‌ಆನ್ 1400 ವರ್ಷಗಳ ಹಿಂದೆಯೇ ಅತ್ಯಂತ ನಿಖರವಾಗಿ ತಿಳಿಸಿದೆ. ಇಂತಹ ಸಂಶೋಧನೆಗಳನ್ನು ಕೈಗೊಳ್ಳುವುದು ಮಾನ-ವರಾದ ಪ್ರವಾದಿ ಮುಹಮ್ಮದ್ (ಅವರ ಮೇಲೆ ಶಾಂ-ತಿಯಿರಲಿ) ರಿಂದ ಅಸಾಧ್ಯವಾಗಿದೆ.

ಅಂತಿಮ ಮಾತು

ತಮ್ಮ ಅಮೂಲ್ಯವಾದ ಸಮಯವನ್ನು ಈ ಕಿರು ಲೇ-ಖನವನ್ನು ಓದಲು ಕಳೆದುದಕ್ಕಾಗಿ ಧನ್ಯವಾದಗಳು. ಯಾವುದೇ ವ್ಯಕ್ತಿಯನ್ನು ಗುರಿಯಾಗಿಟ್ಟು ಅಥವಾ ಒಂದು ಧರ್ಮದ ಅನುಯಾಯಿಗಳ ಮನ ನೋಯಿ-ಸುವಂತಹ ಉದ್ದೇಶದಿಂದ ಈ ಕೈಪಿಡಿಯನ್ನು ರಚಿಸಲಾ-ಗಿಲ್ಲ. ದೇವನ ಸಂದೇಶವನ್ನು ಮಾನವಕೋಟಿಗೆ ತಲುಪಿ-

ಸುವುದರ ಜೊತೆಗೆ ನಮ್ಮ ಜೀವನದ ನೈಜ ಉದ್ದೇಶವನ್ನು ಅರಿತುಕೊಳ್ಳುವ ಸಲುವಾಗಿ ಮಾತ್ರ ಈ ಲೇಖನವನ್ನು ತಮ್ಮ ಮುಂದಿಡುತ್ತಿದ್ದೇವೆ. ನಮ್ಮೆಲ್ಲರ ಜೀವನದ ಉದ್ದೇಶವು ಒಂದೇ ಆದಾಗ, ದೇವನ ಆದೇಶದಂತೆ ಅವನಿಗೆ ಅಧೀನರಾಗಿ ಜೀವನ ಸಾಗಿಸುವುದರಿಂದ ನಾವಿರುವ ಸಮಾಜವು ಬದಲಾಗುವುದರೊಂದಿಗೆ ಈ ಜಗತ್ತಿನಲ್ಲಿ ಮಾನವರು ನೆಲೆಯೂರಲು ಅತ್ಯಂತ ಯೋಗ್ಯ ಸ್ಥಳವಾಗಿ ರೂಪುಗೊಳ್ಳುವುದು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees

Mangalore